**ಜೈನ್ ಕಾಲೇಜ್, ಜಯನಗರ ಬೆಂಗಳೂರು – 560069**

**ಪ್ರಥಮ ಪಿಯುಸಿ, ವಿಷಯ: ಕನ್ನಡ ಮಾದರಿ ಪ್ರಶ್ನೆ ಪರೀಕ್ಷೆ – ಜನವರಿ 2017**

**ಸಮಯ: 03 ಗಂಟೆ 15 ನಿಮಿಷಗಳು** **ಅಂಕಗಳು: 100**

**ಅ– ವಿಭಾಗ**

**1. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:** 1X10=10

1. ಚಕ್ರವ್ಯೂಹವನ್ನು ರಚಿಸಿದವರು ಯಾರು?
2. ಅಖಂಡ ಕರ್ನಾಟಕವನ್ನು ಹರಸುತ್ತಿರುವವನು ಯಾರು?
3. ಆಯುಷ್ಯದ ಚಪ್ಪರಕ್ಕೆ ಮಗು ಹೇಗೆ ಹಬ್ಬಿಕೊಳ್ಳಬೇಕು?
4. ಕರುಳ ಬಳ್ಳಿಗೆ ತೊಡರಿದ ಹುಳು ಯಾವುದು?
5. ಬುದ್ಧನಿಗೆ ಜ್ಞಾನೋದಯವಾದ ದಿನ ಯಾವುದು?
6. ಬಡವರ ವಕೀಲರೆಂದು ಪ್ರಸಿದ್ಧರಾದವರು ಯಾರು?
7. ಹುಲಿಯು ನಾಪಿತನಿಗೆ ಏನನ್ನು ನೀಡುತ್ತೇನೆಂದಿತು?
8. ಬೋಳೇಶಂಕರನ ಅಣ್ಣ ಅತ್ತಿಗೆಯರಿಗೆ ಉಂಟಾದ ಆಸೆ ಯಾವುದು?
9. ಬೋಳೇಶಂಕರನಿಂದ ಬೇರು ಕಿತ್ತುಕೊಳ್ಳಲು ಪಿಶಾಚಿ ಯಾವ ರೂಪದಲ್ಲಿ ಬರುತ್ತದೆ?
10. ಕತ್ತಲೆಯ ನಿಜ ಜನಕ ಯಾರು?

**ಆ– ವಿಭಾಗ**

**2. (ಅ) ಈ ಕೆಳಗಿನ ನಾಲ್ಕು ಪ್ರಶ್ನೆಗಳಿಗೆ 2–3 ವಾಕ್ಯದಲ್ಲಿ ಉತ್ತರಿಸಿ.** **2 X 4=8**

11. ಲೋಕ ಹಾಗೂ ಕರಣಗಳ ಚೇಷ್ಟೆಗೆ ಬೀಜ ಯಾವುದು?
12. ಶಿವನ ಮೇಲೆ ಚೆನ್ನಯ್ಯ ಮುನಿಸಿಕೊಳ್ಳಲು ಕಾರಣವೇನು?
13. ನಾಡಿನ ಹೊರಗಿನ ಒಳಗಿನ ಕಳ್ಳರು ಯಾರು?
14. ಕಾಗದದ ದೋಣಿಗಳಾಗಿ ತೇಲುತ್ತಿರುವುವು ಯಾವುವು?
15. ಅಮ್ಮಿಯ ಪಾಲಿಗೆ ನಮಾಜ್ ಮತ್ತು ಈದ್ ಎಂದರೆ ಯಾವುದು?

**(ಆ) ಈ ಕೆಳಗಿನ ಮೂರು ಪ್ರಶ್ನೆಗಳಿಗೆ 2–3 ವಾಕ್ಯದಲ್ಲಿ ಉತ್ತರಿಸಿ.** **2 X 3=6**

16. ವೈದ್ಯಾಧಿಕಾರಿಯ ಜ್ಞಾಪಕಕ್ಕೆ ಬಂದದ್ದು ಏನು?
17. ರಾಹುಕಾಲ, ಗುಳಿಕಕಾಲ ಯಮಗಂಡ ಕಾಲಗಳ ಬಗ್ಗೆ ಲೇಖಕರ ಅಭಿಪ್ರಾಯವೇನು?
18. ರಂಗರಾವ್ ಸಮಾಧಿಯ ಮೇಲೆ ಬರೆದ ಹೇಳಿಕೆ ಯಾವುದು?
19. ಸಾಲ ಕೇಳಲು ಹೋದ ಬಡರಾಷ್ಟ್ರಗಳ ಮೇಲೆ ವಿಧಿಸಿದ ನಿರ್ಬಂಧಗಳಾವುವು?

**(ಇ) ಈ ಕೆಳಗಿನ ಮೂರು ಪ್ರಶ್ನೆಗಳಿಗೆ 2–3 ವಾಕ್ಯದಲ್ಲಿ ಉತ್ತರಿಸಿ.** **3 X 2=6**

20. ಸೈತಾನನು ಪಿಶಾಚಿಗಳನ್ನು ಭೂಲೋಕಕ್ಕೆ ಕಳುಹಿಸಿದ್ದು ಏಕೆ?
21. ಬೋಳೇಶಂಕರ ಹುಡುಗಿಯರಿಗೆ ಚಿನ್ನ ಕೊಟ್ಟಿದ್ದಕ್ಕೆ ಸಾವ್ಕಾರಣ್ಣನು ಏನು ಹೇಳುತ್ತಾನೆ?
22. ಸೈತಾನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ?
23. ಸೈತಾನನನಿಗೆ ಮೊದಲ ಪಂಕ್ತಿಯ ಊಟ ನಿರಾಕರಿಸಿದ್ದು ಏಕೆ?

**ಇ– ವಿಭಾಗ**

**3. (ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **3 X 2=6**

24. ರಾಮನ ಸೇವೆ ಸಂದುದೇ ತನಗೆ
25. ನೀನೆಂತ ಬಂಧಾನ ಕೊಟ್ಟೆಪ್ಪ
26. ಜೈವಿಕ ಇಂಧನ ಜೀವಕೆ ಇಂಧನ

**(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **3 X 1=3**

27. ಮನುಷ್ಯ ಸಾಯ್ಧ ಕಲ್ಲು ಸತ್ತಾದ, ಸುಮ್ಕಿರು ಮಂತೆ
28. “ನೀನಿನ್ನೂ ನನ್ನನ್ನು ಕ್ಷಮಿಸಲಿಲ್ಲವೇ?”

**(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ** **3 X 1=3**

29. ಚಿನ್ನ ತಿಂದು ಬದುಕಲಾಗುತ್ತ !
30. ತಲೆಯಿಂದ ಕೆಲಸ ಮಾಡುವುದು ಹೇಗೆಂದು ನಿಮಗೆ ಹೇಳಿಕೊಡುತ್ತೇನೆ.

**ಈ– ವಿಭಾಗ**

**4. (ಅ) ಈ ಕೆಳಗಿನ ಮೂರು ಪ್ರಶ್ನೆಗಳಿಗೆ 5–6 ವಾಕ್ಯದಲ್ಲಿ ಉತ್ತರಿಸಿ.** **4 X 3=12**

31. ದೇಹವೆಂಬ ಬಂಡಿಯನ್ನು ಹೇಗೆ ನಡೆಸಬೇಕೆಂದು ತಿಳಿಸಲಾಗಿದೆ?
32. ಸೀತೆ ಕಲ್ಮರಂ ಕರಗುವಂತೆ ದುಃಖಿಸಿದ ಪರಿಯನ್ನು ವಿವರಿಸಿ.
33. ಹೆಣ್ಣು ಭ್ರೂಣಹತ್ಯೆಯನ್ನು 'ನಾ ಬರಿ ಭ್ರೂಣವಲ್ಲ' ಕವಿತೆ ಹೇಗೆ ವಿರೋಧಿಸುತ್ತದೆ?
34. 'ಮುಟ್ಟಿಕೊಳ್ಳದೆ ಪವಿತ್ರನಾಗಿರಬೇಕೆಂದು' ಹೇಳುವ ಕವಿಯ ಮಾತಿನ ಅರ್ಥವೇನು? ವಿವರಿಸಿ

**(ಆ) ಈ ಕೆಳಗಿನ ಎರಡು ಪ್ರಶ್ನೆಗಳಿಗೆ 5–6 ವಾಕ್ಯದಲ್ಲಿ ಉತ್ತರಿಸಿ.** **4 X 2=8**

35. ಕರಿಯನ ಜೀವನ ಹೇಗಿತ್ತು ? ಜನರು ಆತನನ್ನು ಕಾಣುವ ರೀತಿಯನ್ನು ಲೇಖಕರು ಹೇಗೆ ವಿವರಿಸಿದ್ದಾರೆ?
36. ಶಾಸ್ತ್ರಿ ಮಾಸ್ತರರ ವ್ಯಕ್ತಿತ್ವವನ್ನು ನಿರೂಪಿಸಿ.
37. ಹುಲಿಯು ನಾಪಿತನಿಂದ ತಪ್ಪಿಸಿಕೊಂಡ ರೀತಿಯನ್ನು ನಿರೂಪಿಸಿ.

**(ಇ) ಈ ಕೆಳಗಿನ ಎರಡು ಪ್ರಶ್ನೆಗಳಿಗೆ 5–6 ವಾಕ್ಯದಲ್ಲಿ ಉತ್ತರಿಸಿ.** **4 X 2=8**

38. ತನ್ನ ಕನಸನ್ನು ಕುರಿತು ಬೋಳೇಶಂಕರ ಮಂತ್ರಿಗೆ ಹೇಳಿದ್ದೇನು?
39. ಯುದ್ಧ ಮಾಡಲು ಸೈನಿಕರು ಏಕೆ ನಿರಾಕರಿಸುತ್ತಾರೆ?
40. ತಲೆಯಿಂದ ಕೆಲಸ ಮಾಡಬೇಕೆಂಬ ಸೈತಾನನ ಭಾಷಣದ ಸ್ವಾರಸ್ಯವನ್ನು ವಿವರಿಸಿ.

**ಉ– ವಿಭಾಗ**

**5. (ಅ) ಯಾವುದಾದರೂ ಒಂದು ಪದ್ಯಭಾಗವನ್ನು ಕುರಿತು ಭಾವಾರ್ಥ ಬರೆಯಿರಿ.** **5 X 1=5**

41. ಜನಕಂಗೆ ಜಲಾಂಜಲಿಯಂ
ತನೂಭವಂ ಕುಡುವುದುಚಿತಮದುಗೆಟ್ಟೀಗಳ್
ನಿನಗಾಂ ಕುಡುವಂತಾದುದೆ
ತನುಜ ನೀಂ ಕ್ರಮವಿಪರ್ಯಯಂ ಮಾಡುವುದೇ

42. ಬೆಟ್ಟದಾ ತುದಿಯಲ್ಲಿ ಹುಟ್ಟಿದ ವೃಕ್ಷಕ್ಕೆ
ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ
ಪುಟ್ಟಿಸಿದ ಸ್ವಾಮಿ ತಾ ಹೊಣೆಗಾರನಗಿರಲು
ಗಟ್ಯಾಗಿ ಸಲಹುವನು ಇದಕೆ ಸಂಶಯವಿಲ್ಲ

**(ಆ) ಈ ಕೆಳಗಿನ ಆರು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ:** **2 X 6=12**

43. ಈ ಪದಗಳ ಅರ್ಥ ಬರೆಯಿರಿ: ಕಾವಳ, ಓಗರ
44. ಈ ಪದಗಳಿಗೆ ನಾನಾರ್ಥ ಬರೆಯಿರಿ: ಪಡೆ, ಅರಸು
45. ಈ ಪದಗಳಿಗೆ ತದ್ಭವ ಬರೆಯಿರಿ: ಆಕಾಶ, ಕಾವ್ಯ
46. ಈ ನುಡಿಗಟ್ಟುಗಳನ್ನು ಸ್ವಂತವಾಕ್ಯದಲ್ಲಿ ಬಳಸಿರಿ: ಆಶಾಕಿರಣ, ಮೊರೆಯಿಡು
47. ಈ ಪದಗಳನ್ನು ಬಿಡಿಸಿ ಬರೆಯಿರಿ: ಅಸದಳಮೆಂಬ, ಕತ್ತೆತ್ತಿ
48. ಈ ನಾಮಪದಗಳ ಗ್ರಾಂಥಿಕ ರೂಪ ಬರೆಯಿರಿ: ಕಳುಗಪ್ಪ, ಮಾಡ್ಕೊಳ್ದೇ
49. ಈ ಪದಗಳಿಗೆ ವಿರುದ್ಧಪದ ಬರೆಯಿರಿ: ಸ್ವಾಭಾವಿಕ, ಸುಗುಣ

**(ಇ) ಈ ಕೆಳಗಿನ ವಿಷಯಗಳಲ್ಲಿ ಒಂದನ್ನು ಕುರಿತು ಪ್ರಬಂಧ ಬರೆಯಿರಿ.** **5 X 1=5**

50. ನೈತಿಕ ಮೌಲ್ಯಗಳು
51. ವಿದ್ಯಾರ್ಥಿ ಜೀವನದ ಸವಾಲುಗಳು

**(ಈ) ಈ ಕೆಳಗಿನಗಳಲ್ಲಿ ಒಂದನ್ನು ಕುರಿತು ಪತ್ರಲೇಖನ ಬರೆಯಿರಿ.** **4 X 1=4**

52. ಕಾಲೇಜಿನಲ್ಲಿ ನಡೆದ ರಾಜ್ಯೋತ್ಸವ ಸಮಾರಂಭಕ್ಕೆ ಆಗಮಿಸುವಂತೆ ಕೋರಿ ನಿಮ್ಮ ತಾಯಿಗೆ ಪತ್ರ ಬರೆಯಿರಿ.
53. ನಿಮ್ಮ ಊರಿಗೆ ಗ್ರಂಥಾಲಯ ಸೌಲಭ್ಯವನ್ನು ನೀಡುವಂತೆ ಕೋರಿ ಮುಖ್ಯ ಗ್ರಂಥಪಾಲಕರಿಗೊಂದು ಪತ್ರ ಬರೆಯಿರಿ.

**(ಉ) ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ.** **4 X 1=4**

54. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ.
55. ಬೇಲಿಯೇ ಎದ್ದು ಹೊಲ ಮೇಯ್ದಂತೆ.